ಓ. ಎಸ್. ನಂಃ 113/2016

ಪಿ . ಡಬ್ಲ್ಯೂಃ 1

ದಿಃ10-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಸಿ ಪಿ ಪ್ರತಿವಾದಿ ನಂ **1 ,2,10,12,13** ಪರ ವಕೀಲರಿಂದ ಃ

ಈ ದಾವೆಯಲ್ಲಿ ಪ್ರೇಮವ್ವ ನನ್ನ ತಾಯಿ/14 ನೇ ಪ್ರತಿವಾದಿ ಅವರು ನಾನು ಕೂಡಿ ಇರುತ್ತೇವೆ . ದಾವೆ ಮಾಡುವ ಕಾಲಕ್ಕೆ ಆಸ್ತಿಗಳು ಹೇಗೆ ಬಂದಿದೆ ಎಂದು ಹಿರಿಯರಿಗೆ ಕೇಳಿ ತಿಳಿದುಕೊಂಡು ದಾವೆ ಮಾಡಿದ್ದೇನೆ. ಊರಲ್ಲಿ ಪಂಚರ ಸಮಕ್ಷಮ ವಾಟನಿ ಮಾಡಿಕೊಡಲಿಲ್ಲ ನಂತರ ದಾವೆ ಮಾಡಿದ್ದೇನೆ. 8-9 ವರ್ಷಗಳ ಹಿಂದೆ ವಾಟನಿ ಮಾಡಿ ಕೊಟ್ಟಿರುವುದಿಲ್ಲ. ದಿನಾಂಕ ತಿಂಗಳು ಈಸವಿ ಗೊತ್ತಿಲ್ಲ. ದಾವೆಯನ್ನು ಎಷ್ಟು ಜನರ ಮೇಲೆ ಮಾಡಿದ್ದೇನೆ ಎಂದು ಗೊತ್ತಿದೆ. ನಾನು 1 ನೇ ಪ್ರತಿವಾದಿಯನ್ನು ಮಾತ್ರ ಹಿಸ್ಸೆ ಮಾಡಿಕೊಡು ಎಂದು ಕೇಳಿದ್ದೇನೆ. ಯಾವಾಗ ಕೇಳಿದೆ ಎಂದು ನೆನಪಿಲ್ಲ. ನಾನು 1 ನೇ ಪ್ರತಿವಾದಿಯನ್ನು ಹಿಸ್ಸೆ ಮಾಡಿಕೊಡು ಎಂದು ಕೇಳಿದ್ದೇನೆ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಯಾವ ದಿನಾಂಕ ತಿಂಗಳು ಈಸವಿಯಂದು 1 ನೇ ಪ್ರತಿವಾದಿಯನ್ನು ಹಿಸ್ಸೆ ಮಾಡಿಕೊಡು ಎಂದು ಕೇಳಿದ್ದೇನೆ ಎಂದು ದಾವೆಯಲ್ಲಿ ಬರೆಸಿಲ್ಲ . ಪ್ರತಿವರ್ಷ ಠಾಣೆಯಲ್ಲಿ ಹೋಗಿ ಹಿಸ್ಸೆ ಮಾಡಿ ಕೊಡಲು ಕೇಳಿದ್ದೇನೆ. 35-40 ವರ್ಷಗಳಿಂದ ಇವರೆಗೆ ಹಿಸ್ಸೆ ಆಗಿಲ್ಲ. ಸದರಿ ವಿಷಯವನ್ನು ದಾವೆಯಲ್ಲಿ ಬರೆಸಿಲ್ಲ.ರಿಸನಂಬರ 9 8 ಎಕರೆ 21 ಗುಂಟೆ ಮೇಲೆ ಟ್ರಿಬುನಲ್‌ನಲ್ಲಿ ಕೇಸ ಇದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಟ್ರಿಬುನಲ್ ಇಂದ ಮಂಜುರಾಗಿದೆ . ರಿಸನಂಬರ 9 ಕ್ಕೆ ಪಾರ್ಮ ನಂಬರ 7, 7 ಎಯನ್ನು ಹನುಮಂತಗೌಡ ಮಲ್ಲನಗೌಡ ಅವರು ತುಂಬಿದ್ದಾರೆ. ಹನುಮಂತಗೌಡ ಮಲ್ಲನಗೌಡ ಅವರು ತುಂಬಿದ್ದಾರೆ ಎಂದು ದಾಖಲೆಗಳನ್ನು ನೋಡಿ ಗೊತ್ತಾಗಿದೆ. ಪಾರ್ಮ ನಂಬರ 10, 7, ಆದೇಶ ಪ್ರತಿಗಳನ್ನು ನೋಡಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ . ಹನುಮಂತಗೌಡ ಮಲ್ಲನಗೌಡ ಅವರು ರಿಸನಂಬರ 9 ಕ್ಕೆ ಪಾರ್ಮ ನಂಬರ 7 ನ್ನು ತುಂಬಿಲ್ಲ ಎಂದರೆ ಸರಿಯಲ್ಲ .ರಾಮನಗೌಡ ಅವರಿಗೆ ಒದಲು ಬರೆಯಲು ಬರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಅನಕ್ಷರಸ್ಥ ಇದ್ದ ಕಾರಣ ಪಾರ್ಮ ನಂಬರ 7 ತುಂಬಿರಲಿಲ್ಲ ನಂತರ ಪಾರ್ಮ ನಂಬರ 7 ಎ ಯನ್ನು ತುಂಬಿದ್ದಾರೆ

ಎಂದರೆ ಗೊತ್ತಿಲ್ಲ. ಸದರಿ ಕುರಿತು ಟ್ರಿಬುನಲ್ ನಲ್ಲಿ ಕೇಸ ಚಾಲ್ತಿಯಲ್ಲಿ ಇದೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಒಬ್ಬನೇ ಉಳುಮೆ ಮಾಡುವುದರಿಂದ ಅವನು ಮಾತ್ರ ಫಾರ್ಮ ನಂಬರ 7 ಎ ತುಂಬಿದ್ದಾನೆ ಎಂದರೆ ಸರಿಯಲ್ಲ. ರಿಸನಂಬರ 9 ರ ಮೂಲ ಮಾಲೀಕರು ದೇಶಪಾಂಡೆ ಅವರಿಗೆ ಸೇರಿದ್ದು ಅದರ ಪೈಕಿ ನನ್ನ ಮೂಲ ಪುರಷ ಫಾರ್ಮ ನಂಬರ 7 ತುಂಬಿದ್ದರ ಬಗ್ಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಒಬ್ಬನೇ ಉಳುಮೆ ಮಾಡುವುದರಿಂದ ಅವನು ಮಾತ್ರ ಫಾರ್ಮ ನಂಬರ 7 ಎ ತುಂಬಿದ್ದಾನೆ ಎಂದು ಗೊತ್ತಿದ್ದರೂ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಈ ವರ್ಷ ಬಿತ್ತನೆ ಮಾಡಿದ್ದೇನೆ. ಅದರ ಬಗ್ಗೆ ದಾಖಲೆಗಳು ಇಲ್ಲ . ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.